**ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ಉಪಕುಲಪತಿಗಳನ್ನು ನೇಮಕ**

3627 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ಉಪ ಕುಲಪತಿಗಳ ಜಾಗ ಖಾಲಿ ಇರುವುದು ನಿಜವಲ್ಲವೆ?*

*ಆ) ಹಾಗಿದ್ದಲ್ಲಿ, ಈ ಜಾಗವನ್ನು ಭರ್ತಿ ಮಾಡಲು ಕೈಗೊಂಡ ಕ್ರಮಗಳೇನು?*

*ಇ) ಈ ಹುದ್ದೆಯನ್ನು ಯಾವಾಗ ತುಂಬಲಾಗುವುದು?*

ಶ್ರೀ ಎಸ್. ಚಿಕ್ಕೇಗೌಡ (ಕೃಷಿ ಸಚಿವರು):

ಅ) ಹೌದು.

ಆ) ಕೃಷಿ ವಿಶ್ವವಿದ್ಯಾನಿಲಯಗಳ ಕಾಯ್ದೆ, 1963ರ ಕಲಂ 12 (2) ರ ಪ್ರಕಾರ ಆಯ್ಕೆ ಸಮಿತಿಯಿಂದ ಶಿಫಾರಸ್ಸು ಮಾಡಲ್ಪಟ್ಟ ಅಭ್ಯರ್ಥಿಗಳ ಪಟ್ಟಿಯಿಂದ ಒಬ್ಬರನ್ನು ಉಪಕುಲಪತಿಗಳಾಗಿ ಕುಲಪತಿಗಳು ನೇಮಕಾತಿ ಮಾಡಬೇಕಾಗುತ್ತದೆ. ಆಯ್ಕೆ ಸಮಿತಿಯಲ್ಲಿ ಈ ಕೆಳಕಂಡ ಸದಸ್ಯರಿರುತ್ತಾರೆ.

1. ಕುಲಪತಿಗಳಿಂದ ನಾಮನಿರ್ದೇಶನ ಮಾಡಲ್ಪಟ್ಟ ಒಬ್ಬ ವ್ಯಕ್ತಿ.
2. ಭಾರತೀಯ ಕೃಷಿ ಅನುಸಂಧಾನ ಮಂಡಳಿಯ ಮಹಾನಿರ್ದೇಶಕರು.
3. ವಿಶ್ವವಿದ್ಯಾನಿಲಯ ಅನುದಾನ ಆಯೋಗದ ಅಧ್ಯಕ್ಷರು ಅಥವಾ ಅವರಿಂದ ನಾಮನಿರ್ದೇಶನ ಹೊಂದಿದ ವ್ಯಕ್ತಿ.
4. ರಾಜ್ಯ ಸರ್ಕಾರದಿಂದ ನಾಮನಿರ್ದೇಶನ ಹೊಂದಿದ ಒಬ್ಬ ವ್ಯಕ್ತಿ.

ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ಉಪ ಕುಲಪತಿಗಳ ನೇಮಕಾತಿಗೆ ಸಂಬಂಧಪಟ್ಟಂತೆ ಆಯ್ಕೆ ಸಮಿತಿಯನ್ನು ರಚಿಸಲು ಕುಲಪತಿಗಳ ಈಗಾಗಲೇ ಕ್ರಮ ಪ್ರಾರಂಭಿಸಿದ್ದಾರೆ. ಸರ್ಕಾರದ ವತಿಯಿಂದ ಈ ಸಮಿತಿಗೆ ಈಗಾಗಲೇ ನಾಮನಿರ್ದೇಶನ ಕಳುಹಿಸಲಾಗಿದೆ.

ಇ) ಆಯ್ಕೆ ಸಮಿತಿಯು ನಿರ್ದಿಷ್ಟಪಡಿಸಿದ ಅವಧಿಯಲ್ಲಿ ಅಭ್ಯರ್ಥಿಗಳ ಪಟ್ಟಿಯನ್ನು ಕುಲಪತಿಗಳಿಗೆ ಸಲ್ಲಿಸಿದ ನಂತರ ನೇಮಕಾತಿ ಮಾಡಲಾಗುವುದು.

**ಕವೇರಿಗಳಲ್ಲಿ ಸರ್ವೆ ಮ್ಯಾಪ್‌ಗಳು ದೊರೆಯದಿರುವ ಬಗ್ಗೆ**

3666 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬಳ್ಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಭೂದಾಖಲೆಗಳ ಇಲಾಖೆಯ ಕಾರ್ಯಲಯ ಮತ್ತು ಬೆಂಗಳೂರಿನಲ್ಲಿರುವ ಇತರೆ ಕಾರ್ಯಾಲಯಗಳು ಮತ್ತು ಇತರೆ ಜಿಲ್ಲಾ ಕಛೇರಿಗಳಲ್ಲಿ ಭೂ ಮಾಪನ ನಕ್ಷೆ ಮತ್ತು ಗ್ರಾಮ ನಕ್ಷೆ (ನಕಾಶೆಗಳು) ಸಾರ್ವಜನಿಕರಿಗೆ ಲಭ್ಯವಿಲ್ಲದೇ ಇರುವುದು ನಿಜವೇ?*

*ಆ) ಇದಕ್ಕೋಸ್ಕರ ಹೊಸ ಯಂತ್ರವನ್ನು ಇತ್ತೀಚೆಗೆ ಖರೀದಿಸಿರುವುದು ನಿಜವೇ?*

*ಇ) ಹಾಗಿದ್ದಲ್ಲಿ, ಗ್ರಾಮ ನಕಾಶೆಗಳ ಸರಬರಾಜು ಮಾಡುವುದರಲ್ಲಿ ವಿಳಂಬಕ್ಕೆ ಕಾರಣಗಳೇನು ಮತ್ತು ಲಭ್ಯವಿಲ್ಲದಿರುವುದರ ಬಗ್ಗೆ ಕಾರಣಗಳೇನು?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಇಲ್ಲ.

ಆ) ಹೌದು.

ಇ) ನಕಾಶೆಗಳನ್ನು ಸರಬರಾಜು ಮಾಡುವಲ್ಲಿ ವಿಳಂಬವಾಗಿರುವುದಿಲ್ಲ.